ಕಲಿಯಬೇಕು, ಆದಷ್ಟು ಬರೆಯಬೇಕು ಎಂಬುದು ನನ್ನ ಇರಾದೆ ಕೂಡ. ತನುಜನ ತೊದಲು ಮುದ್ದು ಮಾತುಗಳು ನನ್ನೊಳಗೆ ಸಂತೋಷದ ಕಾರಂಜಿ ಹುಟ್ಟಿಸತೊಡಗಿದ್ದವು. ಅಪ್ಪ ಎನಿಸಿಕೊಂಡ ಪ್ರಾಣಿಗೆ ತನ್ನ ಕುಡಿಗಳ ಸಕಲ ಕ್ರಿಯೆಗಳು ಅದೆಷ್ಟು ಸಂತಸ ಕೊಡುತ್ತವಲ್ಲ!

ನನ್ನ ತಲೆ ಮತ್ತು ಮುಖದ ಕ್ರಿಯಾಕರ್ಮಗಳು ಆದಷ್ಟು ಬೇಗ ಮುಗಿದವು. ಗಡಿಯಾರ ನೋಡಿಕೊಂಡೆ. 'ಓಹೋ ಡ್ಯೂಟಿಗೆ ಹೋಗೋ ಸಮಯವಾಗುತ್ತಿದೆ.' ಗಡಿಬಿಡಿ ಅವಸರ ಎಲ್ಲಾ ಒಟ್ಟಿಗೆ ನನ್ನೊಳಗೆ ಹುಟ್ಟಿಕೊಂಡವು. ತಕ್ಷಣ ಸುತನ ಬಾಚಿ ಬಳಕೊಂಡು ಮನೆ ಕಡೆಗೆ ಹಾರಿ ಹೋದೆ. ಬಚ್ಚಲಲ್ಲಿ ಬಿಸಿನೀರು ಕಾಯುತ್ತಿತ್ತು.

ಧಬಾ ಧಬಾ ಬಿಸಿನೀರು ಸುರುವಿಕೊಂಡು ಆಹ್ಲಾದಪಡುತ್ತಿದ್ದ ನನಗೆ ಮನೆಯೊಳಗೆ ಗಾಬರಿಗೊಂಡು ಕೂಗಿಕೊಂಡ ಶಬ್ದ ತಕ್ಷಣಕ್ಕೆ ಕೇಳಲಿಲ್ಲ. ಅಸಲಿಗೆ ನನ್ನ ಶ್ರೀಮತಿಯೇ ಕಿರುಚಾಡುತ್ತಿದ್ದವಳು. ಅದು ದಿನವೂ ಮಾಮೂಲಿ ನಡೆಯುವ ಗಲಾಟೆ ಇರಬಹುದೆಂದು ನಿರ್ಲಕ್ಷಿಸಿ ಜಳಕ ಮುಂದುವರೆಸಿದೆ. ಬೆಳಗಿನ ತಿಂಡಿ ತಿನಿಸುವಾಗ ಆಕೆ ನಮ್ಮೆರಡು ಮಕ್ಕಳ ಜೊತೆ

